ರಾಧೆಯ ಪಾಡು

(ಸಖಿ) 'ಮುಂದೇನೆ? । ಸಖಿ । ಮುಂದೇನೆ? ॥ ಪ ॥'

(ರಾಧೆ) 'ರೂಪ ಗುಣಕೆ ಮೆಚ್ಚಿ
ಬಂದನೆಂದೆನು ಹುಚ್ಚಿ
ಅಂದೆನೇ । ಮನದಿ? ಅಂದೆನೇ'

'ಸಖಿ ಮುಂದೇನೆ? । ಸಖಿ . . . .'

'ಕಾಣುವಂತಹನಲ್ಲ
ಕಾಣದಾದನು ಗೊಲ್ಲ
ಚೆಂದೇನೆ? । ಇದು ಚೆಂದೇನೇ?'

'ಸಖಿ । ಮುಂದೇನೆ? । ಸಖಿ . . . .'

'ಇವನ ಪಂಥವ ತೊಟ್ಟು
ಬಳಗವೆಲ್ಲವ ಬಿಟ್ಟು
ಬಂದೆನೇ। ಅಲ್ಲಿ ಬಂದೆನೇ'
'ಸಖಿ। ಮುಂದೇನೆ? ಸಖಿ....'

'ಒರೆದೆನಂಗ್ಗಲಾಚಿ
ಕರೆದೆ ಜೀವವ ಚಾಚಿ
ನೊಂದೆನೇ। ಬಹಳ ನೊಂದೆನೇ'
'ಸಖಿ। ಮುಂದೇನೆ? ಸಖಿ....'

'ಬರನು, ಕೂತಿತು ಧನಿ
ಕಣ್ಣೆಲ್ಲ ಕಂಬನಿ
ತಂದೆನೇ। ಕರಗಿ ತಂದೆನೇ'
'ಸಖಿ। ಮುಂದೇನೆ? ಸಖಿ....'

'ಕರಣ ಕಳವಳಿಸೀವೆ
ಹರಣ ತಳಮಳಿಸೀವೆ
ಒಂದೇನೇ? ಸ್ಥಿತಿ ಒಂದೇನೆ?'
'ಸಖಿ। ಮುಂದೇನೆ? ಸಖಿ....'

'ಒಗೆದು ಹೂ ದಂಡಿಗೆ
ಯಮುನೆಯ ದಂಡಿಗೆ
ನಿಂದೆನೇ। ದುಃಖಿ ನಿಂದೆನೇ'
'ಸಖಿ। ಮುಂದೇನೆ? ಸಖಿ....'

'ಹೊಳೆಯೊಳು ಹೊತ್ತಾರೆ
ಧುಮುಕಿ ನಾ ಸತ್ತಾರೆ
ಹೊಂದೇನೇ?। ಅವನ ಹೊಂದೆನೇ?'
'ಸಖಿ। ಮುಂದೇನೆ? ಸಖಿ....'

‘ ನಲ್ಲ ತೋರಿಸಿ ಕೊಡು
ಬೇಕಾದ ವರ ಬೇಡು
ಅಂದೇನೇ ?। ಸಖಿ ಅಂದೇನೇ ’
‘ ಸಖಿ । ಮುಂದೇನೆ ? ಸಖಿ . . . . ’

ಕೃಷ್ಣ :—ನಾನೆಲ್ಲಿ ಹೋಗಿದ್ದೆ
ನಿನ್ನ ಎದೆಯೊಳಗಿದ್ದೆ,
ನಿಂದೆನೇ, ಹೊರಗೆ ಬಂದೇನೇ
ಸಖಿ, ಮುಂದೆನೇ ನಿನ್ನ ಮುಂದೆನೇ !